# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 61
ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 04-03-2025
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾ ಗುತ್ತಿರುವ ಯೋಜನೆಗಳು ಯಾವುವು; ಅದರ ಮಾರ್ಗ ಸೂಚಿಗಳೇನು; (ಮಾಹಿತಿ ನೀಡುವುದು) | ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳ ವಿವರಗಳು ಈ ಕೆಳಕಂಡಂತಿರುತ್ತವೆ.<br>1) ಕೇಂದ್ರ ಸರ್ಕಾರದ 15ನೇ ಹಣಕಾಸು ಆಯೋಗದ ಅನುದಾನಕ್ಕೆ ಸಂಬಂಧಿಸಿದಂತೆ ಮತ್ತು ಅಮೃತ್-2.0 ಯೋಜನೆ ಮಾರ್ಗಸೂಚಿಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>2) ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3 ಮತ್ತು ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆ ಮಾರ್ಗಸೂಚಿಗಳನ್ನು **ಅನುಬಂಧ-2 ಮತ್ತು ಅನುಬಂಧ-3** ರಲ್ಲಿ ನೀಡಲಾಗಿದೆ.<br>3) ನಗರ ಸ್ಥಳೀಯ ಸಂಸ್ಥೆಯಲ್ಲಿ ಎಸ್.ಎಫ್.ಸಿ. ಮುಕ್ತನಿಧಿ, ಎಸ್.ಎಫ್.ಸಿ. ಕುಡಿಯುವ ನೀರು ಹಾಗೂ ಎಸ್.ಎಫ್.ಸಿ. ವಿಶೇಷ ಅನುದಾನ ಯೋಜನೆ ಮಾರ್ಗಸೂಚಿಗಳನ್ನು **ಅನುಬಂಧ-4**ರಲ್ಲಿ ನೀಡಲಾಗಿದೆ. |
| (ಆ) | ಈ ಯೋಜನೆಗೆ ಬಿಡುಗಡೆಯಾದ ಮತ್ತು ಬಾಕಿಯಿರುವ ಅನುದಾನವೆಷ್ಟು; ಬಾಕಿ ಮೊತ್ತ ಬಿಡುಗಡೆ ಮಾಡಲಾಗುವುದು ಯಾವಾಗ; (ಯೋಜನಾವಾರು ಮಾಹಿತಿ ನೀಡುವುದು) | ಮುಖ್ಯಮಂತ್ರಿಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3 ಮತ್ತು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಗಳಡಿ ಬಿಡುಗಡೆಯಾದ ಮತ್ತು ಬಿಡುಗಡೆಗೆ ಬಾಕಿಯಿರುವ ಅನುದಾನ ವಿವರಗಳನ್ನು **ಅನುಬಂಧ-5** ರಲ್ಲಿ ನೀಡಲಾಗಿದೆ.<br>ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಸ್.ಎಫ್.ಸಿ. ಮುಕ್ತನಿಧಿ, ಎಸ್.ಎಫ್.ಸಿ. ಕುಡಿಯುವ ನೀರು ಹಾಗೂ ಎಸ್.ಎಫ್.ಸಿ. ವಿಶೇಷ ಅನುದಾನ ಯೋಜನೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರದಿಂದ ಹಂಚಿಕೆ ಮಾಡಿ ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು **ಅನುಬಂಧ-6** ರಲ್ಲಿ ನೀಡಲಾಗಿದೆ.<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಯಗಳಿಗೆ ಬಿಡುಗಡೆಗೊಳಿಸಲಾದ ಮತ್ತು ಬಾಕಿ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತದೆ. |

| | | ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷ) | ಬಿಡುಗಡೆ ಯಾದ ಮೊತ್ತ (ರೂ.ಲಕ್ಷ) | ಬಾಕಿ ಮೊತ್ತ (ರೂ.ಲಕ್ಷ) |
|---|---|---|---|---|---|---|
| | | 1 | **ಅ) ಕೇಂದ್ರ ಪುರಷ್ಕೃತ ಅಮೃತ 2.0 ಯೋಜನೆಗಳು :-**<br><br>1) ಕೇಂದ್ರ ಪುರಷ್ಕೃತ ಅಮೃತ 2.0 ಯೋಜನೆಯಡಿ ಔರಾದ (ಬಾ) ಪಟ್ಟಣ ಹಾಗೂ 06 ಹಳ್ಳಿಗಳು ಮತ್ತು ಕಮಲನಗರ ಪಟ್ಟಣಕ್ಕೆ ಕಾರಂಜಾ ಜಲಾಶಯದಿಂದ ಕುಡಿಯುವ ನೀರು ಸರಬರಾಜು ಯೋಜನೆ. | 8482.00 | 2914.73 | 5567.27 |
| | | | 2) ಕೇಂದ್ರ ಪುರಷ್ಕೃತ ಅಮೃತ 2.0 ಯೋಜನೆಯಡಿ ಹುಮನಾಬಾದ, ಚಿಟ್ಟಗುಪ್ಪಾ ಮತ್ತು ಹಳ್ಳಿಖೇಡ (ಬಿ) ಪಟ್ಟಣಕ್ಕೆ ಕಾರಂಜಾ ಜಲಾಶಯದಿಂದ ಕುಡಿಯುವ ನೀರು ಸರಬರಾಜು ಯೋಜನೆ | 16045.00 | 643.56 | 15401.44 |
| | | | **ಆ) ರಾಜ್ಯ ಸರ್ಕಾರದ ನಗರೋತ್ಥಾನ ಹಂತ -3 ಯೋಜನೆ :**<br>**1) ಹುಮನಾಬಾದ ಪಟ್ಟಣ:**<br>ಅ) ಹುಮನಾಬಾದ ಪಟ್ಟಣದ ಧನಗರಗಡ್ಡಾದಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಿಸುವ ಕಾಮಗಾರಿ. | 154.00 | 154.00 | 9.24 (Additional 6% GST included) |
| | | | **2) ಚಿಟಗುಪ್ಪ ಪಟ್ಟಣ :**<br>ಅ) ಚಿಟಗುಪ್ಪ ಪಟ್ಟಣದ ಎನ್.ಜಿ.ಓ. ಕಾಲೋನಿಯಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣದ ಕಾಮಗಾರಿ | 120.25 | 95.00 | 32.47 (Additional 6% GST included) |

| | | | | | | |
|---|---|---|---|---|---|---|
| | | | ಆ) ಚಿಟಗುಪ್ಪ ಪಟ್ಟಣದ ಝೋನ್-4 ನಾನಾ ಹಜ್ಜುರಥ ದರ್ಗಾಯಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ರಿಂದ ವಾರ್ಡ್-23 ಫಾತಿಮಾಪೂರ ಆಶ್ರಯ ಕಾಲೋನಿ ವರೆಗೆ ಕೋಳವೆ ಮಾರ್ಗ ಅಳವಡಿಸುವ ಕಾಮಗಾರಿ | 19.74 | 14.50 | 6.43 (Additional 6% GST included) |
| | | | ಇ) ಚಿಟಗುಪ್ಪ ಪಟ್ಟಣದ ಝೋನ್-1 ಎನ್.ಜಿ.ಓ. ಕಾಲೋನಿಯಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ರಿಂದ ವಾರ್ಡ್-22 ಆಶ್ರಯ ಕಾಲೋನಿ ವರೆಗೆ ಕೋಳವೆ ಮಾರ್ಗ ಅಳವಡಿಸುವ ಕಾಮಗಾರಿ | 27.86 | 19.00 | 10.54 (Additional 6% GST included) |
| | | | ಈ) ಚಿಟಗುಪ್ಪ ಪಟ್ಟಣದ ಝೋನ್-4 ನಾನಾ ಹಜ್ಜುರಥ ದರ್ಗಾಯಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ರಿಂದ ವಾರ್ಡ್-22 ಪ್ರಿಯಾ ದರ್ಶಿನಿ ಆಶ್ರಯ ಕಾಲೋನಿ ವರೆಗೆ ಕೋಳವೆ ಮಾರ್ಗ ಅಳವಡಿಸುವ ಕಾಮಗಾರಿ | 37.00 | 25.50 | 13.72 (Additional 6% GST included) |
| | | | ಉ) ಚಿಟಗುಪ್ಪ ಪಟ್ಟಣದ ವಾರ್ಡ ಸಂಖ್ಯೆ: 22 ರಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ, 250 ಮಿ.ಮೀ. ಡಿ.ಐ. ಕೆ-7 ಕೊಳವೆ ಮಾರ್ಗ ಒದಗಿಸಿ, ಅಳವಡಿಸುವುದು ಮತ್ತು ವಲಯ-4 ರಲ್ಲಿ ವಿತರಣಾ ಜಾಲ ಒದಗಿಸಿ ಅಳವಡಿಸುವ ಕಾಮಗಾರಿ. | 388.13 | 316.00 | 72.13 |

| | | |
|---|---|---|
| (ಇ) | ಸರಿಯಾದ ಸಮಯಕ್ಕೆ ಅನುದಾನ ಬಿಡುಗಡೆಯಾಗದೆ ಕಾಮಗಾರಿ ಅನುಷ್ಠಾನವಾಗದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರಿಯಾದ ಸಮಯಕ್ಕೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಬಂದಿದೆ.<br><br>15ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರಕ್ಕೆ ದಿನಾಂಕ:10.02.2025 ಮತ್ತು 19.02.2025 ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಇತರೆ ಕಾಮಗಾರಿಗಳ ಪ್ರಗತಿಗನುಗುಣವಾಗಿ ಹಂತ-ಹಂತವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗಿರುತ್ತದೆ. |

ಸಂಖ್ಯೆ:ನಅಇ 47 ಎಸ್‌ಎಫ್‌ಸಿ 2024

**(ರಹೀಂ ಖಾನ್)**

ಪೌರಾಡಳಿತ ಹಾಗೂ ಹಜ್ ಸಚಿವರು